# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 840 |
| ಸದಸ್ಯರ ಹೆಸರು | ಶ್ರೀ ಪಿ.ಆರ್.ರಮೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 09.03.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಧಿಕೃತ / ಅನಧಿಕೃತ ಕಲ್ಲು ಕ್ವಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು / ತಾಲ್ಲೂಕುವಾರು / ಗ್ರಾಮವಾರು ವಿವರ ನೀಡುವುದು) | ರಾಜ್ಯದಲ್ಲಿ ನಿರ್ದಿಷ್ಟ ಉಪಖನಿಜಗಳ ಗಣಿಗಾರಿಕೆಗಾಗಿ 517 ಕಲ್ಲುಗಣಿ ಗುತ್ತಿಗೆಗಳನ್ನು 2353.06 ಎಕರೆ ಪ್ರದೇಶದಲ್ಲಿ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳ ಗಣಿಗಾರಿಕೆಗಾಗಿ 2493 ಗುತ್ತಿಗೆಗಳನ್ನು 10567 ಎಕರೆ ಪ್ರದೇಶದಲ್ಲಿ ಮಂಜೂರು ಮಾಡಲಾಗಿರುತ್ತದೆ.<br>**ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.**<br>ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲುಗಣಿಗಾರಿಕೆ ಸಂಬಂಧ 1259 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿರುತ್ತದೆ. |
| ಆ) | ಈ ಅನಧಿಕೃತ ಕಲ್ಲುಕ್ವಾರಿಗಳ ನಿಯಂತ್ರಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | • ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ವಿಧಿಸಿ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ರ ಕಲಂ 21 ಹಾಗೂ 22 ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46 ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. |

--2

<table>
<tr>
<td></td>
<td></td>
<td>

• ಅನಧಿಕೃತ ಕಲ್ಲು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ.

• ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.

• ಕಲ್ಲು ಗಣಿಗಾರಿಕೆಗೆ ಗುತ್ತಿಗೆ / ಲೈಸನ್ಸ್ ಮಂಜೂರು ಮಾಡುವ ಪೂರ್ವದಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಆದೇಶದಂತೆ ಸಂಬಂಧಪಟ್ಟ ಅರ್ಜಿದಾರರಿಂದ ಕಡ್ಡಾಯವಾಗಿ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆ / ಲೈಸನ್ಸ್ ಗಳನ್ನು ಮಂಜೂರು ಮಾಡಲಾಗುತ್ತದೆ.

• ರಾಜ್ಯ ವ್ಯಾಪ್ತಿಯಲ್ಲಿನ DGMS ನಿಂದ ಅನುಮತಿ ಪಡೆದು ಕಲ್ಲುಗಣಿ ಗುತ್ತಿಗೆ ಕಾರ್ಯ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಅನಧಿಕೃತ ಕಲ್ಲುಗಣಿಗಾರಿಕೆ ಸಂಬಂಧ ಕೈಗೊಂಡ ಕ್ರಮಗಳ ವಿವರ ಕೆಳಕಂಡಂತಿದೆ:

**ಕಲ್ಲುಗಣಿಗಾರಿಕೆ :-** **(ರೂ.ಲಕ್ಷಗಳಲ್ಲಿ)**

<table>
<tr><th>ಕ್ರ. ಸಂ</th><th>ವರ್ಷ</th><th>ಪತ್ತೆ ಹಚ್ಚಿದ ಪ್ರಕರಣಗಳು</th><th>ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ</th><th>ವಸೂಲಾದ ದಂಡ</th></tr>
<tr><td>1.</td><td>2018-19</td><td>413</td><td>108</td><td>1213.37</td></tr>
<tr><td>2.</td><td>2019-20</td><td>266</td><td>117</td><td>908.70</td></tr>
<tr><td>3.</td><td>2020-21</td><td>580</td><td>99</td><td>781.06</td></tr>
<tr><td colspan="2">ಒಟ್ಟು</td><td>1259</td><td>324</td><td>2903.13</td></tr>
</table>

</td>
</tr>
<tr>
<td>ಇ)</td>
<td>ಅಧಿಕೃತ ಕಲ್ಲುಕ್ವಾರಿಗಳಲ್ಲಿ ಸ್ಫೋಟಕ ಸಾಮಗ್ರಿ ಸಾಗಾಣಿಕೆ / ಶೇಖರಣೆ / ಬಳಕೆ / ವಿಲೇವಾರಿ ಮುಂತಾದ ಕಾರ್ಯಗಳ ಕುರಿತು ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು (Standard Operation Procedure) ಪಾಲನೆ ಮಾಡಲು ಸರ್ಕಾರದಿಂದ ಯಾವುದಾದರೂ ಆದೇಶ ಹೊರಡಿಸಲಾಗಿದೆಯೇ (ವಿವರ ನೀಡುವುದು)</td>
<td>ಸ್ಫೋಟಕ ಕಾಯ್ದೆ, 1884 ಮತ್ತು ಸ್ಫೋಟಕ ನಿಯಮಗಳು, 2008 ರನ್ವಯ ಅಧಿಕೃತ ಕಲ್ಲು ಕ್ವಾರಿಗಳಲ್ಲಿ ಸ್ಫೋಟಕ ಸಾಮಗ್ರಿ ಸಾಗಾಣಿಕೆ / ಶೇಖರಣೆ / ಬಳಕೆ / ವಿಲೇವಾರಿ ಕುರಿತು ಪರವಾನಗಿ ನೀಡಲು Chief Controller of Explosives, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಮಂತ್ರಾಲಯ ಇವರು ಸಕ್ಷಮ ಪ್ರಾಧಿಕಾರವಾಗಿರುತ್ತದೆ.<br>ಸದರಿ ಕೇಂದ್ರ ಮಂತ್ರಾಲಯದ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.</td>
</tr>
</table>

--3

| | | |
|---|---|---|
| | | ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಆದೇಶ ಸಂಖ್ಯೆ 949 ನ್ನು ಪರಿಷ್ಕರಿಸಿ, ಪೊಲೀಸ್ ಪ್ರಧಾನ ಕಚೇರಿ ಸುತ್ತೋಲೆ ಸಂಖ್ಯೆ ಕಾನೂನು(1)/26/2020-21, ದಿನಾಂಕ 29.01.2021 ರನ್ವಯ ಆಯಾ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್, ಕಲ್ಲುಗಣಿಗಳು, ಸ್ಫೋಟಕಗಳ ಮಾರಾಟಗಾರರು ಇತ್ಯಾದಿ ವಿವರಗಳನ್ನು ಸಂಬಂಧಿಸಿದ ಇತರ ಇಲಾಖೆಗಳ ಸಹಯೋಗದೊಂದಿಗೆ ಪರಿಶೀಲಿಸಲು ನಿರ್ದೇಶಿಸಲಾಗಿದೆ.<br><br>ಪೊಲೀಸ್ ಪ್ರಧಾನ ಕಚೇರಿ ಜ್ಞಾಪನ ಸಂಖ್ಯೆ ಕಾನೂನು(1)/26/ 2020-21, ದಿನಾಂಕ 29.01.2021 ರನ್ವಯ ಸ್ಫೋಟಕಗಳ ಅನಧಿಕೃತ ಬಳಕೆ / ಸಂಗ್ರಹ / ಸಾಗಾಣಿಕೆ ತಡೆ ಕುರಿತು ಗುಪ್ತ ಮಾಹಿತಿ ಆಧರಿಸಿ, ನಿರ್ದಿಷ್ಟ ದಾಳಿಗಳನ್ನು ನಡೆಸಿ, ವಿಶೇಷ ಅಭಿಯಾನ ಕೈಗೊಳ್ಳಲು ನಿರ್ದೇಶಿಸಲಾಗಿದೆ. |
| ಈ) | ಅಧಿಕೃತ ಕಲ್ಲು ಕ್ವಾರಿಗಳಲ್ಲಿ ಸ್ಫೋಟಕ ಸಾಮಗ್ರಿ ಸಾಗಾಣಿಕೆ / ಶೇಖರಣೆ / ಬಳಕೆ / ವಿಲೇವಾರಿ ಮುಂತಾದ ಕಾರ್ಯಗಳ ಕುರಿತು ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ (Standard Operation Procedure) ಪಾಲನೆ ಮಾಡುವಲ್ಲಿ ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು? | ಅಧಿಕೃತ ಕಲ್ಲು ಕ್ವಾರಿಗಳಲ್ಲಿ ಸ್ಫೋಟಕ ಸಾಮಾಗ್ರಿಗಳ ಸಾಗಾಣಿಕೆ / ಶೇಖರಣೆ / ಬಳಕೆ / ವಿಲೇವಾರಿ ಕುರಿತು ಜಾರಿಯಲ್ಲಿರುವ ನಿಯಮಗಳ ಉಲ್ಲಂಘನೆ ಪ್ರಕರಣಗಳಲ್ಲಿ ಕಾಯ್ದೆಯನ್ವಯ ಪ್ರಕರಣ ದಾಖಲಿಸಿಕೊಂಡು ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ ಸಿಐ 122 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

# ಚಾಲ್ತಿ ಕಲ್ಲುಗಣಿ ಗುತ್ತಿಗೆಗಳ ವಿವರಗಳು

| ಕ್ರ.ಸಂ. | | ಚಾಲ್ತಿ ನಿರ್ದಿಷ್ಟ ಕಲ್ಲುಗಣಿ ಗುತ್ತಿಗೆಗಳು | | ಚಾಲ್ತಿ ನಿರ್ದಿಷ್ಟವಲ್ಲದ ಕಲ್ಲುಗಣಿ ಗುತ್ತಿಗೆಗಳು | |
|---|---|---|---|---|---|
| | ಜಿಲ್ಲೆ | ಮಂಜೂರಾದ ಒಟ್ಟು ಗುತ್ತಿಗೆಗಳು | ಒಟ್ಟು ವಿಸ್ತೀರ್ಣ (ಎಕರೆ/ ಗುಂಟೆಗಳಲ್ಲಿ) | ಮಂಜೂರಾದ ಒಟ್ಟು ಗುತ್ತಿಗೆಗಳು | ಒಟ್ಟು ವಿಸ್ತೀರ್ಣ (ಎಕರೆ/ ಗುಂಟೆಗಳಲ್ಲಿ) |
| 1 | ಬೆಂಗಳೂರು ಗ್ರಾಮಾಂತರ | 39 | 54.00 | 95 | 236.20 |
| 2 | ಬೆಂಗಳೂರು ನಗರ | 0 | 0 | 161 | 567.30 |
| 3 | ಚಾಮರಾಜನಗರ | 44 | 206.00 | 39 | 123.03 |
| 4 | ಚಿಕ್ಕಮಗಳೂರು | 7 | 41.01 | 81 | 221.10 |
| 5 | ಚಿಕ್ಕಬಳ್ಳಾಪುರ | 34 | 183.07 | 75 | 304.21 |
| 6 | ದಕ್ಷಿಣ ಕನ್ನಡ | 4 | 4.00 | 108 | 290.03 |
| 7 | ಉಡುಪಿ | 11 | 22.00 | 117 | 355.08 |
| 8 | ಹಾಸನ | 20 | 143.38 | 100 | 661.08 |
| 9 | ಕೋಲಾರ | 7 | 35.35 | 77 | 298.35 |
| 10 | ಮಂಡ್ಯ | 5 | 31.20 | 114 | 228.05 |
| 11 | ಮೈಸೂರು | 8 | 20.00 | 15 | 28.35 |
| 12 | ಕೊಡಗು | 6 | 11.35 | 38 | 158.05 |
| 13 | ರಾಮನಗರ | 53 | 171.00 | 71 | 391.08 |
| 14 | ಶಿವಮೊಗ್ಗ | 0 | 0 | 56 | 58.02 |
| 15 | ತುಮಕೂರು | 27 | 98.29 | 114 | 436.23 |
| 16 | ಬೆಳಗಾವಿ | 12 | 192.00 | 202 | 845.16 |
| 17 | ಬಳ್ಳಾರಿ | 11 | 41.24 | 113 | 677.36 |
| 18 | ಬೀದರ್ | 0 | 0 | 13 | 43.18 |
| 19 | ಬಿಜಾಪುರ | 0 | 0 | 49 | 134.18 |
| 20 | ಚಿತ್ರದುರ್ಗ | 8 | 51.21 | 115 | 593.20 |
| 21 | ದಾವಣಗೆರೆ | 0 | 0 | 125 | 283.23 |
| 22 | ಧಾರವಾಡ | 0 | 0 | 125 | 173.08 |
| 23 | ಗದಗ | 4 | 24.29 | 78 | 374.38 |
| 24 | ಹಾವೇರಿ | 0 | 0 | 35 | 73.25 |
| 25 | ಗುಲ್ಬರ್ಗಾ | 0 | 0 | 164 | 1327.23 |
| 26 | ಯಾದಗಿರಿ | 0 | 0 | 28 | 147.28 |
| 27 | ಹೊಸಪೇಟೆ | 0 | 0 | 0 | 0.00 |
| 28 | ಬಾಗಲಕೋಟೆ | 31 | 248.20 | 32 | 649.00 |
| 29 | ಕೊಪ್ಪಳ | 132 | 559.08 | 56 | 299.36 |
| 30 | ರಾಯಚೂರು | 54 | 215.19 | 83 | 444.18 |
| 31 | ಉತ್ತರ ಕನ್ನಡ | 0 | 0 | 14 | 147.08 |